**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ. 1007/2019 ಫ್ರಾ.ಸಾ -1**

**ಚಾ.ಸಾ - 1**

**ದಿನಾಂಕಃ 09.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಮಲ್ಲೇಶ್ ಹೆಚ್ ಸಿ |
| ತಂದೆಯ ಹೆಸರು | : | ಚಿಕ್ಕೇಗೌಡ |
| ವಯಸ್ಸು | : | 50 ವರ್ಷ |
| ಉದ್ಯೋಗ | : | CHC |
| ವಾಸ ಸ್ಥಳ | : | ಬೆಟ್ಟದಪುರ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು 2017 ರಿಂದ 2023 ರ ತನಕ ಪಿರಿಯಾಪಟ್ಟಣ ಪೊ.ಠಾಣೆಯಲ್ಲಿ CHC ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 02.08.2019 ರಂದು ರಾತ್ರಿ ಕರ್ತವ್ಯಕ್ಕೆ ನನ್ನನ್ನು ನೇಮಕ ಮಾಡಿದ್ದು ನನ್ನ ಜೊತೆ ಚಾಸಾ 5 ರವರನ್ನು ನೇಮಕ ಮಾಡಿದ್ದು ಇಲಾಖಾ ಜೀಪಿನಲ್ಲಿ ಉಪ್ಪರಗೇರಿ ಸಿದ್ದಪುರ ವೃತ್ತ ಬೆಟ್ಟದಪುರ ಸರ್ಕಲ್ ಶಿವಪ್ಪ ಬಡಾವಣೆ, ನೌಕರರ ಬಡಾವಣೆ, ಆದಿನ ಕರಾಳ ರಾತ್ರಿ (ಅಮಾವಾಸ್ಯೆ) ಆದ ಕಾರಣ ಹೆಚ್ಚಿನ ನಾಕ ಬಂದಿ ಗಸ್ತುಗಳನ್ನು ಚಾಸಾ 3 ಮತ್ತು 4 ರವರೊಂದಿಗೆ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಸಮಯ ರಾತ್ರಿ 03.30 ಕ್ಕೆ ಕುಶಲಾನಗರ ಕಡೆಯಿಂದ ಒಂದು ಗೂಡ್ಸ್ ಆಟೋ ಬಂದಿದ್ದು ಅದನ್ನು ತಡೆದು ಪರಿಶೀಲಿಸಲಾಗಿ ಚಾಲಕರ ಜೊತೆ ಮುಂಭಾಗದಲ್ಲಿ ಇಬ್ಬರು ಕುಳಿತಿದ್ದು ಹಿಂಬದಿಯಲ್ಲಿ ಇಬ್ಬರು ವ್ಯಕ್ತಿಗಳು ಆರು ದೊಡ್ಡ ಆಡುಗಳು ಮತ್ತು 2 ಮರಿಗಳು ಇರುವುದು ಕಂಡು ಬಂತು. ನಾವು ಇದರ ಬಗ್ಗೆ ವಿಚಾರಿಸಿದಾಗ ಅವುಗಳನ್ನು ಕೆ. ಆರ್

ನಗರಕ್ಕೆ ಮಾರಾಟ ಮಾಡಲು ಸಲುವಾಗಿ ಗೋಣಿಕೊಪ್ಪದಿಂದ ತಂದಿರುವುದಾಗಿ ಗಾಬರಿಯಲ್ಲಿ ತಿಳಿಸಿದರು. ಅವರನ್ನು ಸೂಕ್ಷ್ಮವಾಗಿ ವಿಚಾರಿಸಿದಾಗ 1 ನೇ ಆರೋಪಿ ರಿಂದ 4 ನೇ ಆರೋಪಿ ಅವರ ಹೆಸರು ಮತ್ತು ವಿಳಾಸ ತಿಳಿಸಿದರು. ಚಾಲಕನನ್ನು ವಿಚಾರಿಸಿದಾಗ ಅವರ ಹೆಸರು ಮತ್ತು ವಿಳಾಸ ತಿಳಿಸಿದನು. 1 ನೇ ಆರೋಪಿ ನನ್ನನ್ನು ಬಾಡಿಗೆಗೆ ಕರೆದುಕೊಂಡು ಬಂದಿರುವುದಾಗಿ ಚಾಲಕ ತಿಳಿಸಿದನು. ನಂತರ ನಮಗೆ ಅನುಮಾನ ಬಂದು ಆಟೋ, ಮಾಲು, ಆರೋಪಿತರನ್ನು ಬೆಳಗಿನ ಜಾವ 05.00 ಗಂಟೆಗೆ ಚಾಸಾ 13 ರವರ ಮುಂದೆ ಹಾಜರು ಮಾಡಿ ಮುಂದಿನ ಕ್ರಮದ ಬಗ್ಗೆ ವರದಿ ನೀಡಿರುತ್ತೇನೆ.

ಸಾಕ್ಷಿಯು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಾಣಿಗಳ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 2 ಮತ್ತು 3 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಸಿ. ಪಿ. ವಕೀಲರಿಂದಃ**

ಗಸ್ತು ಮಾಡುತ್ತಿದ್ದ ಬಗ್ಗೆ ನಿ ಪಿ 1 ದಾಖಲೆ ಕೊಟ್ಟಿರುತ್ತೇನೆ, ಆದರೆ ಪೊ. ಠಾಣೆಯ ದಾಖಲೆಗಳು ಕೊಟ್ಟಿಲ್ಲ. ತಾತ್ಕಲಿಕವಾಗಿ ಚೆಕ್ ಪೋಸ್ಟ್ ಮಾಡಿದ ಕಾರಣಕ್ಕೆ ವಾಹನಗಳನ್ನು ಹಾಗೇ ತಪಾಸಣೆ ಮಾಡುತ್ತಿದ್ದೆವು, ಆದರೆ ಯಾವುದೇ ರಿಜಿಸ್ಟರ್ ಇಟ್ಟಿರುವುದಿಲ್ಲ. ತನಿಖಾಧಿಕಾರಿ ನಾನು ಆರೋಪಿಗಳನ್ನು ದಸ್ತಗಿರಿ ಮಾಡಿದ ಜಾಗದಲ್ಲಿ ಮಹಜರ್ ಮಾಡಿರಬಹುದು. ಮಹಜರ್ ಇಲ್ಲದಿರುವುರಿಂದ ದಸ್ತಗಿರಿ ಮತ್ತು ಆಡುಗಳನ್ನು ತೆಗದಿರುವುದಿಲ್ಲ ಎಂದರೆ ಸರಿಯಲ್ಲ. ಫೋಟೋಗಳಲ್ಲಿ ನಾನು ಇಲ್ಲ ಎಂದರೆ ಸರಿ. ಈ ಪ್ರಕರಣಕ್ಕೂ, ಫೋಟೋಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಿರಿಯಾಪಟ್ಟಣ ನ್ಯಾಯಾಲಯದಲ್ಲಿ ಇದೇ ಪ್ರಕರಣಕ್ಕೆ ಇನ್ನೊಂದು FIR ಆಗಿದೆ

ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ನಾಲ್ವರು ಎಂದರೆ ಸರಿ, ಇನ್ನೊಬ್ಬ ವ್ಯಕ್ತಿ ಕೇವಲ ಚಾಲಕನಾಗಿರುತ್ತಾನೆ. 5 ನೇ ವ್ಯಕ್ತಿ ಚಾಲಕ ಆತನನ್ನು ಪೊ. ಠಾಣೆಗೆ ನಾನು ಕರೆದುಕೊಂಡು ಹೋಗಿರುತ್ತೇನೆ, ನಂತರ ತನಿಖಾಧಿಕಾರಿ ಅವರನ್ನು ಆರೋಪಿಯನ್ನಾಗಿ ಯಾಕೆ ಮಾಡಲಿಲ್ಲ ನನಗೆ ಗೊತ್ತಿಲ್ಲ. ನಾನು ಮೇಲೆ ಹೇಳಿದಂತೆ ಸಾಕ್ಷ್ಯದಂತೆ ಆರೋಪಿತರನ್ನು, ಗಾಡಿಯನ್ನು, ಆಡುಗಳನ್ನು ಹಿಡಿದಿಲ್ಲ ಮತ್ತು ವರದಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ವಾಹನವನ್ನು ಹಿಡಿದ ಸ್ಥಳದಲ್ಲಿ ವಾಹನಗಳ ದಟ್ಟಣೆ ಇರುವುದು ಸರಿ, ಆದರೆ ರಾತ್ರಿ ಆದ ಕಾರಣ ಅಷ್ಟು ಇರಲಿಲ್ಲ. ಆರೋಪಿಗಳು ಆಡುಗಳನ್ನು ಕದಿಯಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವಾಹನದ ಇತರೇ ವಿವರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಕ್ರಮ ಕೈ ಗೊಳ್ಳದೇ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ, ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ